ಆಮರಣಾಂತ ಉಪವಾಸವನ್ನು ಕೂಡುವುದಾಗಿ ಕೂಡ ಹೇಳಲಾಗಿದೆ. ಮೊನ್ನೆಯ ದಿನ ನಾವು ಅವರ ಜೊತೆ ಮಾತನಾಡಿ ಇಂಥ ತೀರ್ಮಾನವನ್ನು ಯಾವುದಕ್ಕೂ ಸಭೆ ಮುಗಿದ ಮೇಲೆ ತೀರ್ಮಾನ ತೆಗೆದುಕೊಳ್ಳಿ ಎಂದು ಒಪ್ಪಿಸಿದ್ದೇವೆ. ಮತ್ತೆ ನಾವು ಇದರ ಬಗ್ಗೆ ಅವರನ್ನು ಸಮಾಧಾನಪಡಿಸಲು ಆಗುವುದಿಲ್ಲವಾದ ಕಾರಣ ನಾವೂ ಕೂಡ ಅವರ ಜೊತೆ ಸತ್ಯಾಗ್ರಹವನ್ನು ಕೂಡಬೇಕಾಗುತ್ತದೆ, ಆ ಕಾರಣಕ್ಕಾಗಿ ತಾವು ದಯವಿಟ್ಟು ಶುಕ್ರವಾರವೇ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದ ಬಗ್ಗೆ ಈ ಸದನದಲ್ಲಿ ತಿಳಿಸಬೇಕು.

ಶ್ರೀ ಬಸವರಾಜ್ ಪಾಟೀಲ್ ಯತ್ನಾಳ್: ಮಾನ್ಯ ಉಪಾಧ್ಯಕ್ಷರೇ, ಇದು ಜೀವನ್ಮರಣ ಪ್ರಶ್ನೆ ಇದು.

ಉಪಾಧ್ಯಕ್ಷರು: ಯತ್ನಾಳ್‌ರವರೇ, ನಿಮಗೆ ಮಾತನಾಡುವುದಕ್ಕೆ ನಾನು ಅವಕಾಶ ಕೊಟ್ಟಿಲ್ಲವಾದ ಕಾರಣ ನೀವು ಮಾತನಾಡಿದ ಯಾವುದೇ ವಿಷಯಗಳು ದಾಖಲೆಗೆ ಹೋಗುವುದಿಲ್ಲ. ಶೂನ್ಯವೇಳೆ ಅವಧಿಯ ವ್ಯಾಪ್ತಿಯಲ್ಲಿ ಪುಟ್ಟೇಗೌಡರೇ, ನೀವು ವಿಷಯವನ್ನು ಪ್ರಸ್ತಾಪ ಮಾಡಿ.

(ಈ ಹಂತದಲ್ಲಿ ಮಾನ್ಯ ಸದಸ್ಯರುಗಳಾದ ಶ್ರೀ ಬಸವರಾಜಪಾಟೀಲ್ ಯತ್ನಾಳ್‌ರವರು ಮತ್ತು ರಾಜಶೇಖರ ಶೀಲವಂತರವರು ಸದನದ ಬಾವಿಯೊಳಗೆ ಧರಣಿ ಕುಳಿತರು)

ಶ್ರೀ ಸಿ.ಎಸ್.ಪುಟ್ಟೇಗೌಡ: ಮಾನ್ಯ ಉಪಾಧ್ಯಕ್ಷರೇ, ನನ್ನ ವಿಧಾನಸಭಾ ಕ್ಷೇತ್ರದಲ್ಲಿ ಬಾಗೂರು-ನವಿಲೆ ಸುರಂಗಮಾರ್ಗ ಎಂದು ತೋಡಿ ಇವ್ವೊತ್ತು ತುಮಕೂರು ಮತ್ತು ಮಂಡ್ಯ ಜನರಿಗೆ ನೀರನ್ನು ಕೊಡುವ ಸಲುವಾಗಿ ಸುಮಾರು ಬಹುಶಃ 9.76 ಕಿ.ಮೀ ಸುರಂಗ ಮಾರ್ಗವನ್ನು ತೋಡಿ ತುಮಕೂರು ಮತ್ತು ಮಂಡ್ಯ ಜನರಿಗೆ ನೀರನ್ನು ಕೊಡುವ ಸಲುವಾಗಿ....

ಶ್ರೀ ಬಸವರಾಜ ಪಾಟೀಲ್ ಯತ್ನಾಳ್ (ಬಿಜಾಪುರ): ಮಾನ್ಯ ಉಪಾಧ್ಯಕ್ಷರೇ, ಅಲ್ಲಿನ ಪರಿಸ್ಥಿತಿ ಬಹಳ ಗಂಭೀರವಾಗಿದೆ ವಯೋವೃದ್ಧರಾದ ಬಿ.ಎಸ್.ಪಾಟೀಲ್ ಮನಗೊಳಿಯವರು ಸತ್ಯಾಗ್ರಹ ಕುಳಿತಿದ್ದಾರೆ.

ಉಪಾಧ್ಯಕ್ಷರು: ಯಡಿಯೂರಪ್ಪನವರು ಅಲ್ಲಿ ಸತ್ಯಾಗ್ರಹ ಕುಳಿತಿರುವ ಶಾಸಕರುಗಳು ವಯೋವೃದ್ಧರಿದ್ದಾರೆ ಮತ್ತು ಅಲ್ಲಿ ಸ್ವಾಮಿಗಳೂ ಕೂಡ ಉಪವಾಸ ಕುಳಿತಿದ್ದಾರೆ ಎಂದಿದ್ದಕ್ಕೆ ನಾನು ಇವ್ವೊತ್ತು ಶೂನ್ಯವೇಳೆಯಲ್ಲಿ ಚರ್ಚೆಗೆ ಇದನ್ನು ತೆಗೆದುಕೊಂಡಿದ್ದು. ಇವ್ವೊತ್ತು ಮೊದಲು ಶೂನ್ಯ ವೇಳೆಯ ಅವಧಿ ಇರಲಿಲ್ಲ.

(ಗೊಂದಲ)